

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 25-01-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸುವ ಬದರೀ ಸಹಾಬರಲ್ಲಿ ಮೊದಲನೆಯ ಹೆಸರು ಹಝ್ರತ್ ತುಫೈಲ್ ಬಿನ್ ಹಾರಿಸ್(ರ) ಅವರದಾಗಿದೆ. ಅವರು ತನ್ನ ಸಹೋದರರಾದ ಹಝ್ರತ್ ಉಬೈದ ಮತ್ತು ಹಝ್ರತ್ ಹುಸೈನ್‌ರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅದೇ ರೀತಿ ಅವರು ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದರು. ಅವರು ಎಪ್ಪತ್ತನೆಯ ವರ್ಷ ಪ್ರಾಯದಲ್ಲಿ ಹಿಜರಿ ವರ್ಷ 32ರಲ್ಲಿ ಮೃತರಾದರು.

ಎರಡನೆಯ ಸಹಾಬಿ ಹಝ್ರತ್ ಸಲೀಮ್ ಬಿನ್ ಅಮರ್ ಅನ್‌ಸಾರಿ(ರ). ಅವರು ಅಖಬದಲ್ಲಿ ಎಪ್ಪತ್ತು ಜನರೊಂದಿಗೆ ಬೈಅತ್ ಮಾಡಿದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಲೀಮ್ ಬಿನ್ ಹಾರಿಸ್ ಅನ್‌ಸಾರಿ(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಶಹಾದತ್ ಪದವಿ ಗಳಿಸಿದರು. ಮುಂದಿನ ಸಹಾಬಿ ಹಝ್ರತ್ ಸಲೀಮ್ ಬಿನ್ ಮಲ್‌ಹಾನ್ ಅನ್‌ಸಾರಿ(ರ). ಅವರ ತಾಯಿಯ ಹೆಸರು ಮಲೀಕ ಬಿನ್ತ್ ಮಾಲಿಕ್. ಅವರು ಹಝ್ರತ್ ಅನಸ್ ಬಿನ್ ಮಾಲಿಕರ ಸೋದರ ಮಾವ ಮತ್ತು ಹಝ್ರತ್ ಉಮ್ಮು ಹರಾಮ್ ಮತ್ತು ಹಝ್ರತ್ ಉಮ್ಮು ಸಲೀಮರ ಸಹೋದರರಾಗಿದ್ದರು. ಹಝ್ರತ್ ಉಮ್ಮು ಹರಾಮ್ ಹಝ್ರತ್ ಉಬಾದತ್ ಬಿನ್ ಸಾಮಿತ್‌ರವರ ಪತ್ನಿಯಾಗಿದ್ದರು. ಹಝ್ರತ್ ಉಮ್ಮು ಸಲೀಮ್ ಹಝ್ರತ್ ಅಬೂ ತಲ್‌ಹ ಅನ್‌ಸಾರಿಯವರ ಪತ್ನಿಯಾಗಿದ್ದರು. ಅವರ ಪುತ್ರ ಹಝ್ರತ್ ಅನಸ್ ಬಿನ್ ಮಾಲಿಕ್ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ತನ್ನ ಸಹೋದರ ಹಝ್ರತ್ ಹರಾಮ್ ಬಿನ್ ಮಲ್‌ಹಾನ್‌ರೊಂದಿಗೆ ಭಾಗವಹಿಸಿದರು. ಅವರಿಬ್ಬರೂ ಬಿಅ್‌ರ್‌ಮಊನದ ಘಟನೆಯಲ್ಲಿ ಶಹೀದರಾದರು. ಶತ್ರುಗಳ ಸಂಖ್ಯೆ ಹೆಚ್ಚಿಗೆ ಇತ್ತು. ಯುದ್ಧ ನಡೆದಾಗ ಸಹಾಬರು ಶಹೀದ್ ಮಾಡಲ್ಪಟ್ಟರು. ಶತ್ರುಗಳು ಹಝ್ರತ್ ಸಲೀಮ್ ಬಿನ್ ಮಲ್‌ಹಾನ್ ಮತ್ತು ಹಝ್ರತ್ ಹಕಮ್ ಬಿನ್ ಕಸಾನರನ್ನು ಸುತ್ತುವರಿದಾಗ ಅವರು ಹೇಳಿದರು: 'ಓ ಅಲ್ಲಾಹ್, ನಮ್ಮ ಸಲಾಮನ್ನು ನಿನ್ನ ರಸೂಲರಿಗೆ ತಲಪಿಸಬಲ್ಲವರು ನಿನ್ನ ಹೊರತು ಬೇರೆ ಯಾರೂ ಇಲ್ಲ. ಆದುದರಿಂದ ನೀನೇ ನಮ್ಮ ಸಲಾಮ್ ಅವರಿಗೆ ತಲಪಿಸು.' ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಜಿಬ್ರೀಲ್ ಅದರ ಬಗ್ಗೆ ತಿಳಿಸಿದಾಗ ಅವರು ಹೇಳಿದರು: **ಅಲೈಹಿಮುಸ್ಸಲಾಮ್**. ಅವರ ಮೇಲೆ ಶಾಂತಿ ಇರಲಿ ಎಂದು. ಅವರು ಬಹಳ ಶೌರ್ಯದಿಂದ ಶತ್ರುಗಳ ವಿರುದ್ಧ ಹೋರಾಡಿದರು. ಅವರ ಕೈಯಲ್ಲಿ ಯುದ್ಧಕ್ಕೆ ಆವಶ್ಯಕವಾದ ಸಾಮಗ್ರಿಗಳು ಇರಲಿಲ್ಲ. ಅವರು ಯುದ್ಧ ಮಾಡುವ ಸಂಕಲ್ಪದಿಂದ ಹೊರಟಿರಲೂ ಇಲ್ಲ.

ಇನ್ನು ಹಝ್ರತ್ ಸಲೀಮ್ ಬಿನ್ ಖೈಸ್ ಅನ್‌ಸಾರಿ(ರ). ಅವರು ಹಝ್ರತ್ ಖೌಲ ಬಿನ್ತ್ ಖೈಸ್‌ರ ಸಹೋದರನಾಗಿದ್ದರು. ಹಝ್ರತ್ ಖೌಲ ಹಝ್ರತ್ ಹಮ್‌ಝರವರ ಪತ್ನಿಯಾಗಿದ್ದರು. ಹಝ್ರತ್ ಸಲೀಮ್ ಬಿನ್ ಖೈಸ್ ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಉಸ್ಮಾನರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಾಬಿತ್ ಬಿನ್ ಸಅಲಬ(ರ). ಅವರು ಎಪ್ಪತ್ತು ಅನ್‌ಸಾರಿ ಸಹಾಬರೊಂದಿಗೆ ಬೈಅತೆ ಅಖಬ ಸಾನಿಯದಲ್ಲಿ ಭಾಗವಹಿಸಿದರು. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿಯೂ ಹುದೈಬಿಯಾ ಸಂಧಿಯಲ್ಲೂ ಭಾಗವಹಿಸಿದ್ದರು. ಖೈಬರ್ ಯುದ್ಧ, ಮಕ್ಕದ ವಿಜಯ, ತಾಯಿಫ್ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಅವರು ತಾಯಿಫ್ ಯುದ್ಧದ ದಿನ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಮಾಕ್ ಬಿನ್ ಸಅದ್(ರ). ಅವರು ಬದರ್ ಯುದ್ಧದಲ್ಲಿ ತನ್ನ ಸಹೋದರ ಹಝ್ರತ್ ಬಶೀರ್‌ರೊಂದಿಗೆ ಭಾಗವಹಿಸಿದರು. ಅವರು ಉಹುದ್ ಯುದ್ಧದಲ್ಲೂ ಭಾಗವಹಿಸಿದ್ದರು. ಅವರು ಖಝ್‌ರಜ್ ಗೋತ್ರದವರಾಗಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಬಿನ್ ರಿಯಾಬ್(ರ). ಮಕ್ಕಕ್ಕೆ ಆಗಮಿಸಿ ಮೊತ್ತಮೊದಲು ಬೈಅತ್ ಮಾಡಿದ ಆರು ಅನ್‌ಸಾರಿಗಳಲ್ಲಿ ಅವರು ಒಬ್ಬರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಬೈಅತೆ ಅಖಬ ಊಲಾದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮಕ್ಕದಲ್ಲಿ ಭೇಟಿಯಾದ ಆ ಆರು ಜನರ ಹೆಸರುಗಳು ಈ ರೀತಿಯಿದೆ: ಅಸದ್ ಬಿನ್ ಝುರಾರ, ಔಫ್ ಬಿನ್ ಹಾರಿಸ್, ರಾಫಿಅ್ ಬಿನ್ ಮಾಲಿಕ್ ಬಿನ್ ಅಜ್‌ಲಾನ್, ಖುತ್‌ಬ ಬಿನ್ ಆಮಿರ್ ಬಿನ್ ಹದೀದ, ಅಖಬ ಬಿನ್ ಆಮಿರ್ ಬಿನ್ ನಾಬಿ ಮತ್ತು ಜಾಬಿರ್ ಬಿನ್ ಅಬ್ದುಲ್ಲಾ ಬಿನ್ ರಿಯಾಬ್. ಇವರೆಲ್ಲರೂ ಮುಸ್ಲಿಮರಾದರು. ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿದಾಯ ಹೇಳುತ್ತಾ ಅವರು ಹೇಳಿದರು: ನಮ್ಮನ್ನು ನಮ್ಮ ಅಂತರ್ ಕಲಹಗಳು ಬಹಳ ಬಲಹೀನ ಗೊಳಿಸಿವೆ. ನಮ್ಮೊಳಗೆ ಪರಸ್ಪರ ಬಹಳ ಭಿನ್ನಾಭಿಪ್ರಾಯಗಳಿವೆ. ನಾವು ಯಸ್‌ರಿಬ್‌ಗೆ ಹೋಗಿ ನಮ್ಮ ಸಹೋದರರಿಗೆ ಇಸ್ಲಾಮಿನ ತಬ್ಲೀಗ್ ಮಾಡುವೆವು. ಅಲ್ಲಾಹನು ನಿಮ್ಮ ಸಂದೇಶದ ಮೂಲಕ

ಮತ್ತು ನಮ್ಮ ತಬ್ಲೀಗ್ ಮೂಲಕ ನಮ್ಮನ್ನು ಪುನಃ ಒಗ್ಗೂಡಿಸುವುದು ಅಸಂಭವ್ಯವೇನೂ ಅಲ್ಲ. ಹಾಗೆ ನಾವು ಪುನಃ ಐಕ್ಯಗೊಂಡರೆ ಎಲ್ಲಾ ರೀತಿಗಳಲ್ಲೂ ನಿಮಗೆ ಸಹಾಯ ನೀಡಲು ನಾವು ಸಿದ್ಧರಾಗುವೆವು.

ಹಝ್ರತ್ ಮುಂಧಿರ್ ಬಿನ್ ಅಮರ್ ಬಿನ್ ಖುನೀಸ್(ರ) ಇನ್ನೊಬ್ಬ ಸಹಾಬಿಯಾಗಿದ್ದಾರೆ. ಅವರ ಬಿರುದು **ಮುಅ್‌ನಿಖ್ ಲಿಲ್‌ಮೌತ್** ಎಂದರೆ ಮುಂದೆ ಸಾಗಿ ಮೃತ್ಯುವನ್ನು ಆಲಿಂಗಿಸುವವನು. ಖಝ್ರಜ್ ಗೋತ್ರದ ಬನೂ ಸಾಯಿದ ಕುಟುಂಬಕ್ಕೆ ಅವರು ಸೇರಿದ್ದರು. ಅವರು ಬೈಅತೆ ಅಖಬದಲ್ಲಿ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಂಧಿರ್ ಬಿನ್ ಅಮರ್‌ರನ್ನು ಮತ್ತು ಹಝ್ರತ್ ಸಅದ್ ಬಿನ್ ಉಬಾದರನ್ನು ಅವರ ಗೋತ್ರವಾದ ಬನೂ ಸಾಯಿದದ ನಖೀಬ್ ಆಗಿ ನೇಮಿಸಿದ್ದರು. ಎಂದರೆ ನಾಯಕರನ್ನಾಗಿ ಅಥವಾ ಮೇಲ್ವಿಚಾರಕರನ್ನಾಗಿ ನೇಮಿಸಿದ್ದರು. ಹಝ್ರತ್ ಮುಂಧಿರ್ ಅಜ್ಞಾನದ ಕಾಲದಲ್ಲಿಯೂ ಓದಲು ಬರೆಯಲು ಕಲಿತಿದ್ದರು. ಹಝ್ರತ್ ಮುಂಧಿರ್ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಸೂಫೀ ಮನೋಭಾವದವರಾಗಿದ್ದರು. ಬಿಅ್‌ರ್ ಮಊನದಲ್ಲಿ ಶಹೀದರಾದರು.

ಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ. ಜಿಬ್ರೀಲ್ ಅಲೈಹಿಸ್ಸಲಾಮ್ ಬಿಅ್‌ರ್ ಮಊನದಲ್ಲಿ ಶಹೀದರಾದವರ ಬಗ್ಗೆ ಸಮಾಚಾರ ನೀಡಿದಾಗ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಂಧಿರ್ ಬಿನ್ ಅಮರ್ ಬಗ್ಗೆ ಹೇಳಿದರು: **ಆನಿಖುನ್ ಲಿಲ್‌ಮೌತಿ** ಎಂದರೆ ಮುಂಧಿರ್ ಬಿನ್ ಅಮರ್ ಶಹಾದತ್ ಸಂಭವಿಸುವುದೆಂದು ತಿಳಿದಿದ್ದರೂ ತಮ್ಮ ಸಂಗಡಿಗರ ಹಾಗೆ ಹೋರಾಡುತ್ತಾ ಅಲ್ಲಿಯೇ ಶಹೀದರಾದರು. ಹಝ್ರತ್ ಮುಂಧಿರ್ ಬಿನ್ ಅಮರ್‌ರೊಂದಿಗೆ ಆ ಜನರು ಹೇಳಿದ್ದರು: ನೀನು ಬಯಸುವುದಾದರೆ ಅಭಯ ನೀಡುವೆವು ಎಂದು. ಆದರೆ ಅವರು ಶತ್ರುಗಳ ಅಭಯದ ಪ್ರಸ್ತಾಪವನ್ನು ನಿರಾಕರಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಮುಅಬದ್ ಬಿನ್ ಇಬಾದ್(ರ). ಅವರ ಉಪನಾಮ ಅಬೂ ಹಮೀಝು ಎಂದಾಗಿತ್ತು. ಅವರ ಪಿತ ಇಬಾದ್ ಬಿನ್ ಖಶೀರ್. ಖಝ್ರಜ್ ಗೋತ್ರದ ಶಾಖೆಯಾದ ಬನೂ ಸಾಲಿಮ್ ಬಿನ್ ಗನಮ್ ಬಿನ್ ಔಫ್‌ಗೆ ಅವರು ಸೇರಿದ್ದರು. ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೀ ಬಿನ್ ಅಬೀ ಝುಗ್‌ಬಾ ಅನ್‌ಸಾರಿ(ರ). ಅವರ ಪಿತ ಸನಾನ್ ಬಿನ್ ಸಬೀಹ್ ಆಗಿದ್ದರು. ಅವರು ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಮೃತರಾದರು. ಅವರು ಅನ್‌ಸಾರ್‌ಗಳ ಜಹೀನ ಗೋತ್ರದವರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಸೇರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಬದರ್ ಸಂದರ್ಭದಲ್ಲಿ ಹಝ್ರತ್ ಬಸ್‌ಬಸ್ ಬಿನ್ ಅಮರ್ ಜೊತೆಗೆ ಅಬೂ ಸುಫ್‌ಯಾನ್‌ರ ವ್ಯಾಪಾರಿ ಸಂಘದ ಮಾಹಿತಿ ಗಳಿಸಲು ಕಳುಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ರಬೀಅ ಬಿನ್ ಅಯಾಸ್(ರ). ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಶಾಖೆಯಾದ ಬನೂ ಲೌಝಾನ್‌ಗೆ ಸೇರಿದವರಾಗಿದ್ದರು. ಅವರು ತನ್ನ ಸಹೋದರರಾದ ವರಖ ಬಿನ್ ಅಯಾಸ್ ಮತ್ತು ಅಮರ್ ಬಿನ್ ಅಯಾಸ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿಯೂ ಅವರು ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಉಮೈರ್ ಬಿನ್ ಆಮಿರ್ ಅನ್‌ಸಾರಿ(ರ). ಅವರ ಉಪನಾಮ ಅಬೂ ದಾಊದ್. ಅವರ ಪಿತ ಹಝ್ರತ್ ಆಮಿರ್ ಬಿನ್ ಮಾಲಿಕ್. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಸಅದ್ ಬಿನ್ ಖೌಲ(ರ). ಅವರು ಬನೂ ಕಲ್‌ಬ್ ಗೋತ್ರದವರಾಗಿದ್ದರು. ಅವರು ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅರವರ ವಿಮೋಚಿತ ಗುಲಾಮರಾಗಿದ್ದರು. ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ ಹಝ್ರತ್ ಸಅದ್ ಬಿನ್ ಖೌಲರೊಂದಿಗೆ ಬಹಳ ವಾತ್ಸಲ್ಯದಿಂದಲೂ ಸಹಾನುಭೂತಿಯಿಂದಲೂ ವರ್ತಿಸುತ್ತಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಉಮರ್(ರ)ರವರು ಹಝ್ರತ್ ಸಅದರ ಪುತ್ರ ಅಬ್ದುಲ್ಲ ಬಿನ್ ಸಅದರಿಗೆ ಅನ್‌ಸಾರ್‌ಗಳ ಜೊತೆಗೆ ಸಹಾಯಧನ ನಿಶ್ಚೈಯಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಸನಾನ್ ಬಿನ್ ಮುಹ್‌ಸಿನ್(ರ). ಅವರ ಪಿತ ಮುಹ್‌ಸಿನ್ ಬಿನ್ ಹರಸಾನ್. ಹಝ್ರತ್ ಅಬೂ ಸನಾನ್ ಹಝ್ರತ್ ಅಕ್ಕಾಶ ಬಿನ್ ಮಹ್‌ಸಿನರ ಸಹೋದರನಾಗಿದ್ದರು. ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಬೈಅತೆ ರಿಝ್ವಾನ್‌ನಲ್ಲಿಯೂ ಭಾಗವಹಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ಖುರೈಝು ಗೋತ್ರಕ್ಕೆ ಮುತ್ತಿಗೆ ಹಾಕಿದಾಗ ಹಝ್ರತ್ ಅಬೂ ಸನಾನ್ ಮೃತರಾದರು. ಖುರೈಝುರ ಖಬರಸ್ಥಾನದಲ್ಲಿ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ದಫನ್ ಗೊಳಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಖೈಸ್ ಬಿನ್ ಅಸ್ಸುಕನ್ ಅನ್‌ಸಾರಿ(ರ). ಅವರ ತಂದೆಯ ಹೆಸರು ಸುಕ್ನ್ ಎಂದಾಗಿತ್ತು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಿಸಿರುವಾಗ ಪವಿತ್ರ ಖುರ್‌ಆನನ್ನು ಜಮಾಯಿಸಿದ ಸಹಾಬರಲ್ಲಿ ಅವರು ಸೇರಿದ್ದರು. ಹಝ್ರತ್ ಖೈಸ್‌ರವರು ಯೌಮೆ ಜಸರ್ ಸಂದರ್ಭದಲ್ಲಿ ಶಹೀದರಾದರು. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಇರಾನಿನ ವಿರುದ್ಧ ಯುದ್ಧದಲ್ಲಿ ಯುಫ್ರಟಿಸ್ ನದಿಗೆ ಸೇತುವೆ ನಿರ್ಮಿಸಲಾಗಿತ್ತು. ಅದಕ್ಕೆ ಸಂಬಂಧಿಸಿ ಆ ಹೋರಾಟವನ್ನು ಯೌಮೇ ಜಸರ್ ಎಂದು ಕರೆಯಲಾಗುತ್ತದೆ.

ಇನ್ನೊಬ್ಬ ಸಹಾಬಿ ಅಬುಲ್ ಯುಸ್‌ರ್ ಕಅಬ್ ಬಿನ್ ಅಮರ್(ರ). ಅವರ ಪಿತ ಅಮರ್ ಬಿನ್ ಇಬಾದ್. ತಾಯಿ ನಸೀಬ ಬಿನ್ತ್ ಅಝ್‌ಹರ್‌ರವರು ಬನೂ ಸಲ್ಮಾ ಗೋತ್ರದವರಾಗಿದ್ದರು. ಈ ಸಹಾಬಿ ಅಖಬದ ಬೈಅತ್‌ನಲ್ಲಿ

ಸೇರಿದ್ದರು. ಅವರು ಬದರ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಸಿಫ್ಫೀನ್ ಯುದ್ಧದಲ್ಲಿ ಹಝ್ರತ್ ಅಲಿ ಜೊತೆಗೆ ಭಾಗವಹಿಸಿದರು. ಬದರ್ ಯುದ್ಧದಲ್ಲಿ ಅವರು ಹಝ್ರತ್ ಅಬ್ಬಾಸರನ್ನು ಸೆರೆ ಹಿಡಿದಿದ್ದರು. ಅದಕ್ಕೆ ಸಂಬಂಧಿಸಿ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಶ್ಚಯವಾಗಿಯೂ ಒಬ್ಬ ಗೌರವಾನ್ವಿತ ದೇವದೂತ ನಿಮಗೆ ಇದಕ್ಕೆ ಸಹಾಯ ಮಾಡಿರುವರು ಎಂದು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ತನ್ನ ಗ್ರಂಥ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯುತ್ತಾರೆ: ಉಬಾದ ಬಿನ್ ವಲೀದ್‌ರಿಂದ ವರದಿ: ನಾವು ಒಂದು ದಿವಸ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿಯಾದ ಅಬುಲ್‌ಯುಸ್‌ರ್‌ರನ್ನು ಭೇಟಿಯಾದೆವು. ಆಗ ಅವರ ಜೊತೆಗೆ ಒಬ್ಬ ಗುಲಾಮ ಸಹ ಇದ್ದನು. ಆಗ ಅಬುಲ್ ಯುಸ್‌ರರ ದೇಹದ ಮೇಲೆ ಒಂದು ನೆರಿಗೆಯುಳ್ಳ ಚಾದರ್ ಮತ್ತು ಒಂದು ಯಮನೀ ಚಾದರ್ ಇತ್ತು. ಅದೇ ರೀತಿ ಒಂದು ನೆರಿಗೆಯುಳ್ಳ ಚಾದರ್ ಮತ್ತು ಒಂದು ಯಮನೀ ಚಾದರ್ ಆ ಗುಲಾಮನ ದೇಹದಲ್ಲಿಯೂ ಇತ್ತು. ನಾನು ಹೇಳಿದೆ ಚಿಕ್ಕಪ್ಪ, ನೀವು ನೆರಿಗೆಯುಳ್ಳ ಚಾದರ್ ಸ್ವತಃ ಹೊದ್ದುಕೊಂಡು ನಿಮ್ಮ ಯಮನೀ ಚಾದರ್ ಗುಲಾಮನಿಗೆ ಏಕೆ ಕೊಡಲಿಲ್ಲ ಅಥವಾ ಎರಡು ಯಮನೀ ಚಾದರನ್ನು ಸ್ವತಃ ಹೊದ್ದುಕೊಂಡು ಎರಡು ನೆರಿಗೆಯುಳ್ಳ ಚಾದರವನ್ನು ಅವನಿಗೇಕೆ ಕೊಡಲಿಲ್ಲ. ಹಾಗೆ ಮಾಡಿದರೆ ನಿಮ್ಮಿಬ್ಬರ ದೇಹಗಳ ಮೇಲೆ ಒಂದೇ ರೀತಿಯ ಎರಡು ಚಾದರಗಳಾಗುತ್ತಿದ್ದುವು. ಹಝ್ರತ್ ಅಬುಲ್ ಯುಸ್‌ರ್ ಹೇಳಿದರು: ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು: ನೀವು ನಿಮ್ಮ ಗುಲಾಮರಿಗೆ ನೀವು ತಿನ್ನುವ ಆಹಾರವನ್ನೇ ಕೊಡಬೇಕು. ನೀವು ಧರಿಸುವ ಪೋಷಾಕನ್ನೇ ಧರಿಸಲು ಕೊಡಬೇಕು. ಆದುದರಿಂದ ನಾನು ನನ್ನ ಲೌಕಿಕ ಸಂಪತ್ತಿನಲ್ಲಿ ನನ್ನ ಗುಲಾಮನಿಗೆ ಸಮಾನ ಪಾಲು ನೀಡಬೇಕೆಂದು ಇಚ್ಛಿಸುತ್ತೇನೆ. ಖಿಯಾಮತ್ ದಿನ ನನಗೆ ದೊರಕುವ ಪುಣ್ಯದಲ್ಲಿ ಯಾವುದೇ ಕೊರತೆಯಾಗುವುದನ್ನು ನಾನು ಇಚ್ಛಿಸುವುದಿಲ್ಲ.

ಹಝ್ರತ್ ಅಬುಲ್ ಯುಸ್‌ರ್ ಹೇಳುತ್ತಾರೆ: ಬನೂ ಹರಾಂನ ಓರ್ವ ವ್ಯಕ್ತಿ ನನ್ನಿಂದ ಸಾಲ ಪಡೆದಿದ್ದನು. ಒಂದು ದಿನ ನಾನು ಅವನಲ್ಲಿಗೆ ಹೋದೆ. ಅವನು ನನ್ನ ಶಬ್ದ ಕೇಳಿ ಅಡಗಿಕೊಂಡನು. ನಾನು ಅವನನ್ನು ಕೂಗಿ ಕರೆದೆ. ನೀನೆಲ್ಲಿರುವೆ ಎಂದು ನನಗೆ ತಿಳಿದಿದೆ, ಹೊರಗೆ ಬಾ ಎಂದು ಹೇಳಿದೆ. ಅವನು ಹೊರಗೆ ಬಂದು ಹೇಳಿದನು: ದೇವನಾಣೆ, ನಾನು ನಿನ್ನೊಡನೆ ಏನಾದರೂ ಸುಳ್ಳು ಹೇಳಬೇಕಾಗಬಹುದೆಂದು ಹೆದರಿದ್ದೆ. ನಾನು ಕೇಳಿದೆ– ನೀನು ನಿಜವಾಗಿಯೂ ಅಲ್ಲಾಹನ ಆಣೆ ಹಾಕಿ ಈ ಮಾತು ಹೇಳುತ್ತಿರುವೆಯೋ? ಆತ ಹೌದೆಂದನು. ನಾನು ಆತನ ಸಾಲವನ್ನು ಮಾಫಿ ಮಾಡಿದೆ. ಅಬುಲ್ ಯುಸ್‌ರ್ ಹೇಳಿದರು: ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮ ಹೇಳಿದ್ದಾರೆ– ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಯಾರಾದರೂ ಹೆಚ್ಚಿನ ಕಾಲಾವಕಾಶ ನೀಡಿದರೆ ಅಥವಾ ಅವನ ಎಲ್ಲ ಆರ್ಥಿಕ ಹೊರೆಯನ್ನೂ ಇಳಿಸಿದರೆ, ಅವನಿಗೆ ಅಲ್ಲಾಹನು ತನ್ನ ಬಳಿ ಸ್ಥಾನ ನೀಡುವನು ಎಂದು. ನಾನು ಅಲ್ಲಾಹನ ಸಾಮೀಪ್ಯ ಬಯಸುವವನಾಗಿರುವೆನು. ಆದುದರಿಂದ ನಾನು ನಿನ್ನ ಸಾಲವನ್ನು ಮನ್ನಾ ಮಾಡಿರುವೆನು ಎಂದು ಹೇಳಿದರು. ಇದು ಅಲ್ಲಾಹನ ಭಯವನ್ನು ಪ್ರಕಟಪಡಿಸುವ ಮತ್ತೊಂದು ಉದಾಹರಣೆಯಾಗಿದೆ.

ಹಝ್ರತ್ ಅಬುಲ್ ಯುಸ್‌ರ್ ಹದೀಸ್‌ಗಳನ್ನು ವರದಿ ಮಾಡುವುದಕ್ಕೆ ಸಂಬಂಧಿಸಿ ಬಹಳ ಜಾಗರೂಕತೆಯಿಂದ ವರ್ತಿಸುತ್ತಿದ್ದರು. ಹದೀಸ್ ವಿವರಿಸುವಾಗ ಅವರು ತನ್ನ ಕಣ್ಣು ಮತ್ತು ಕಿವಿಗೆ ಬೆರಳು ಇರಿಸಿ ಹೇಳುತ್ತಿದ್ದರು– ಈ ಕಣ್ಣುಗಳು ಆ ಘಟನೆಯನ್ನು ಕಂಡವು, ಈ ಕಿವಿಗಳು ಹಝ್ರತ್ ನಬಿ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಆಲಿಸಿದವು ಎಂದು. ಹಝ್ರತ್ ಅಮೀರ್ ಮುಆವಿಯರವರ ಕಾಲದಲ್ಲಿ ಹಿಜರಿ ವರ್ಷ 55ರಲ್ಲಿ ಅವರು ನಿಧನ ಹೊಂದಿದರು.

ಆ ಸಹಾಬರು ಅದ್ಭುತ ವೈಭವಶಾಲಿಗಳಾಗಿದ್ದರು. ಅವರು ಅಲ್ಲಾಹನಿಗೆ ನಿಷ್ಠೆ ತೋರಿಸುವ ವಿಧಾನವನ್ನು ನಮಗೆ ಕಲಿಸಿದರು. ಅಲ್ಲಾಹನಿಗೆ ಭಯಪಡುವ ವಿಧಾನಗಳನ್ನೂ ಕಲಿಸಿದರು. ಅವರು ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಹೃದಯದ ಆಳಗಳಿಂದ ಅಂಗೀಕರಿಸುವ ವಿಧಾನಗಳನ್ನು ಸಹ ಕಲಿಸಿದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 25-01-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon